

ಸಾಧನೆ ಮಾಡಿದವರು ಕೂಡ ಬದುಕಿನಲ್ಲಿ ಪ್ರೀತಿಯೆನ್ನುವುದನ್ನು ಕಾಣದಿದ್ದರೆ ಹಿಡಿದೂಳಾಗುವುದು ಇದಕ್ಕೇ ಇರಬೇಕು.

ಎಷ್ಟೋ ವರ್ಷಗಳ ಬಳಿಕ ಸಂತೋಷವಾಗಿದ್ದ ಗೆಳತಿಯನ್ನು ತಾನೆಲ್ಲಿ ಮತ್ತೆ ಅವಳ ಒಂಟಿತನದ ಗೂಡಿಗೆ ಕಳಿಸಿಬಿಡುತ್ತೇನೋ ಎನ್ನುವ ದುಗುಡ ಈಗ ಶಾಂತಿಯನ್ನು ಕಾಡಿತು. ತನ್ನ ಪ್ರಶ್ನೆಯನ್ನು ತಿಳಿಗೊಳಿಸಲು ನೋಡಿದಳು.

'ಇರಲಿ ಬಿಡು. ಲೈಫಲ್ಲಿ ಒಮ್ಮೆಯಾದರೂ ಯಾರನ್ನಾದರೂ ಪ್ರೀತಿಸಿದೆಯಲ್ಲ. ಬರೀ ಬೇರೆಯವರು ನಿನ್ನನ್ನು ಪ್ರೀತಿಸಿದ್ದೇ ಆಗಿತ್ತು' ಎಂದು ನಕ್ಕ ಶಾಂತಿ ಮಾತು ಮರೆಸಲು ಯತ್ನಿಸಿದಳು.

ಸುಧಾ ತನ್ನನ್ನು ಯಾರು ಬೇಕಾದರೂ ಪ್ರೀತಿಸಬಲ್ಲರು ಎಂದುಕೊಂಡಿದ್ದಳೇನೋ? ಹಾಗೇ ಇತ್ತಲ್ಲವೇ ಅವಳ ಬದುಕು?

ಶಾಂತಿಗೆ ಹೋಲಿಸಿದರೆ ಸುಧಾ ಅಪ್ರತಿಮ ಸುಂದರಿ. ಸದಾ ಪುಟಿಯುತ್ತಿದ್ದ ನಗೆಬುಗ್ಗೆಯಂತಿದ್ದವಳು. ಜೀವನೋತ್ಸಾಹವೇ ಅವಳು ಎನ್ನುವಂತ ವ್ಯಕ್ತಿತ್ವ. ಅವಳ ಮದುವೆಯಾದ ದಿನ ತಮಗೆ ಅವಕಾಶ ಸಿಗಬಹುದೇನೋ ಎಂದು ಕಾದು ಕುಳಿತಿದ್ದ ಅದೆಷ್ಟೋ ಹುಡುಗರು ನಿರಾಶರಾಗಿದ್ದರು. ತನ್ನ ಗೆಳತಿಯನ್ನು ಮದುವೆಯಾದ ಹುಡುಗನದೇ ಅದೃಷ್ಟ ಎಂದು ಶಾಂತಿಯೂ ಅಂದುಕೊಂಡಿದ್ದಳು. ಅದಕ್ಕೆ ಕಾರಣಗಳೂ ಇದ್ದವು.

ಕಾಲೇಜಿನಲ್ಲಿ ಓದುವಾಗ ಇವರಿಬ್ಬರೂ ಆಪ್ತಸ್ನೇಹಿತೆಯರೆಂದು ತಿಳಿದ ಎಷ್ಟೋ ಹುಡುಗರು ಶಾಂತಿಯಮೂಲಕಸುಧಾಳನ್ನು ತಲುಪುವಪ್ರಯತ್ನ ಮಾಡುತ್ತಿದ್ದರು. ಸುಧಾಳಲ್ಲೇ ತಮ್ಮ ಪ್ರೀತಿಯನ್ನು ನೇರವಾಗಿ ಹೇಳಲಾಗದೆ ಪೇಚಾಡಿಕೊಳ್ಳುತ್ತಿದ್ದ ಹಲವರ ಪ್ರಪೋಸಲ್‌ಗಳನ್ನೂ ಶಾಂತಿಯೇ ಸುಧಾಳಿಗೆ ತಲುಪಿಸಿದ್ದಳು. ಸುಧಾ ಅವರನ್ನು ನಿರಾಕರಿಸಿದಾಗಲೆಲ್ಲ ಆ ಮೆಸೇಜ್ ನೀಡುವ ದೌರ್ಭಾಗ್ಯವೂ ಶಾಂತಿಯ ಪಾಲಿಗೆ ಬರುತ್ತಿತ್ತು. ಸುಧಾ ತಮ್ಮನ್ನು ಒಪ್ಪದಿದ್ದರೂ ಅವಳ ವ್ಯಾಮೋಹದಲ್ಲಿ ಅಂಧರಾಗಿದ್ದ ಕೆಲವರು ಮಧ್ಯವರ್ತಿಯಾಗಿ ಕೆಲಸಮಾಡಿದ ಶಾಂತಿಯಿಂದಲೇ ಸುಧಾ ತಮ್ಮನ್ನು ನಿರಾಕರಿಸಿದಳು ಎಂದು ದೂರಿದ್ದರು. ಕೆಲವೊಮ್ಮೆ ಆ ಹುಡುಗರ ನಿರಾಶೆಗಳಿಗೂ ಶಾಂತಿ ಸಾಂತ್ವನ ಹೇಳಬೇಕಾಗಿ ಬಂದಿತ್ತು.

ಮದುವೆಯ ಸಂಬಂಧಗಳೂ ಹಾಗೆಯೇ ಮುಗಿಬಿದ್ದು ಬಂದಿದ್ದವು. ಸುಧಾಳ ನಿರೀಕ್ಷೆ ಮೀರಿ ಅವಳಿಗೆ ಬೇಗನೆ ಮದುವೆ ನಿಶ್ಚಯವಾಗಿತ್ತು. ಅವಳ ರೂಪು–ಓದಿಗೆ ತಕ್ಕನಾದ, ಮನೆಯವರು ಹೇಳಿದ ಹುಡುಗನನ್ನೇ ಮದುವೆಯಾಗಿದ್ದಳು. ಆಗಿನ್ನೂ ಮದುವೆಯಾಗಿರದ ಶಾಂತಿ ಸುಧಾಳ ಮದುವೆಯಲ್ಲಿ ಸಂಭ್ರಮದಿಂದ ಓಡಾಡಿದ್ದಳು.

'ಇಲ್ಲ, ಅವನು ಡೈವೋರ್ಸಿಯೂ ಅಲ್ಲ, ಬೇಟೆಗಾರನೂ ಅಲ್ಲ, ಇವೆರಡೂ ಆಗಿರಬೇಕಾಗೂ ಇಲ್ಲ' ಎಂದ ಸುಧಾಳ ಸಮಾಧಾನದ ದನಿಯನ್ನು ಕೇಳಿ ಶಾಂತಿಗೆ ಮತ್ತೆ ಅಚ್ಚರಿಯಾಗಿತ್ತು.

'ಮತ್ತೆ?...' ಇದೆಲ್ಲಿ ಹೋಗಿ ಮುಟ್ಟಲು ಸಾಧ್ಯ